DOC-314
T&P-2

(1)

51st Year of Publication ★★ SATYAVADI Daily, MYSORE 4

Reg No B G 155

6-6-1968

ಪ್ರಮುಖ ವರ್ತಮಾನಗಳಿಗೆ -
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6



Space available

For Permanent Advertisement

ಸ್ಥಾಪಕರು : ತರಿಸುಮಿಲೆ ನರಸಿಂಹಾಚಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಭಾಷಾ ನೀತಿಯ ಪರಾಮರ್ಶೆ - ತಿದ್ದುಪಡಿಯ ಯೋಚನೆ

ಮೈಸೂರು ಅಸೋಸಿಯೇಷನ್ ಬಳಿ ಹಾಕಿರುವ ತಮ್ಮ ಸ್ವಂತ ಭವ್ಯ
ಥಿಯೇಟರಿನಲ್ಲಿ ಪ್ರತಿ ದಿನ ಸಂಜೆ 6-30 ರಿಂದ 12-30 ರವರೆಗೆ

ವಿವಿಧ ವಿನೋದ Pastime & sports

ಸುಪ್ರಸಿದ್ಧ ನರ್ತಕಿಯರಿಂದ ವಿವಿಧ ತರದನೃತ್ಯಗಳು, ಹೈದರಾಬಾದಿನ ಸುಪ್ರಸಿದ್ಧ ಜಾದುಗಾರ ಶ್ರೀ ಎಲ್. ಎ. ಬಾಬು ಇವರಿಂದ ಅದ್ಭುತಮಯವಾದ ಇಂದ್ರಜಾಲಾಟ ನಡೆಯುವ ಮಾತನಾಡುವ ಬೊಂಬೆ, ಎಲೆಕ್ಟ್ರಿಕ್ ಕುರ್ಚಿ. ಪ್ರವೇಶದರ 25 ಪೈಸೆ

ದಕ್ಷಿಣ ಕನ್ನಡ ಜಿಲ್ಲೆಯ ತುಳು ನಾಟಕ ಕಲಾವಿದರಿಂದ
8-6-68 ನೇ ಶನಿವಾರ ರಾತ್ರಿ 9-30 ಕ್ಕೆ
ನಗರದ ಟೌನ್ ಹಾಲಿನಲ್ಲಿ
ದಗಲ್‌ಬಾಜಿ ಅಥವಾ ವೋನ
ಎಂಬ ಹಾಸ್ಯಭರಿತ ತುಳು ನಾಟಕವನ್ನು ವಿವಿಧ ವಿನೋದಾವಳಿಗಳು
ಪ್ರವೇಶ : ಪಾಸುಗಳ ಮೂಲಕ
ಕೆ. ಆರ್. ಶೆಟ್ಟಿ, ವ್ಯವಸ್ಥಾಪಕರು.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಕ್ಷಿಪ್ರದಲ್ಲೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮುತ್ತಿತರ ಗಣ್ಯರು ಅಭಿನಂದನ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಎಂತಹ ಅವಿವೇಕ

ನವದೆಹಲಿ— ದೆಹಲಿ ಪ್ರದೇಶ ಕಾಂಗ್ರೆಸು ಸಮಿತಿಯ ಅಧ್ಯಕ್ಷ ಶ್ರೀ ರಾಜೇಶ ಶರ್ಮ ಮತ್ತು ಸುಭದ್ರಾ ಜೋಷಿ ಸೇರಿ ಇತರ 7 ನುಂದಿ ದೆಹಲಿ ಕಾಂಗ್ರೆಸಿಗರು ಶ್ರೀ ಜಿ ಎಲ್ ನಂದಾ ಮತ್ತು ಸೆಠ್ ಗೋವಿಂದದಾಸ್ ಮತ್ತಿತರು ಗೋಹತ್ಯನಿರೋಧ ಚಳವಳಿಗೆ ಬೆಂಬಲ ಕೊಡುತ್ತಿರುವದನ್ನು ಕಾರ್ಯಕಾರಿ ಸಮಿತಿ ನಿಲ್ಲಿಸದಿದ್ದರೆ ಅವರ ವಿರುದ್ಧ ಜಳವಳ ಹೂಡುವದಾಗಿ ತಿಳಿಸಿರುವ ಮನವಿಪತ್ರವನ್ನು ಕಾಂಗ್ರೆಸ್ ಅಧ್ಯಕ್ಷರಿಗೆ ಸಲ್ಲಿಸಲಾಗಿದೆ.

★

ಸೆನೇಟರ್ ಕೆನಡಿ ಹತ್ಯೆ ಪ್ರಯತ್ನ

ಲಾಸ್ ಏಂಜಲ್ಸ್— ಚುನಾವಣೆಯ ಡೆಮೊಕ್ರಾಟ್ ಪಕ್ಷದ ನಾಮಕರಣಕಾಗಿ, ಕ್ಯಾಲಿಫೋರ್ನಿಯದಲ್ಲಿ ನಿಜಯುಗೊಂಡ ಸೆನೇಟರ್ ಕೆನಡಿಗೆ ಹರ್ಷೋದ್ಗಾರ ಮಾಡುತ್ತಿದ್ದ ಗುಂಪಿನಿಂದ ಒಬ್ಬನು ಈಚೆಗೆ ಬಂದು ಅವರ ಮೇಲೆ ಗುಂಡುಹಾರಿಸಿದನು ; ಏಟು ತಗಲಿ ಬಿದ್ದು, ರಕ್ತ ಹರಿಯಿತು – ಕೂಡಲೇ ಆಸ್ಪತ್ರೆ ಸಾಗಿಸಲ್ಪಟ್ಟರು – ಅವರ ಸ್ಥಿತಿ ಚಿಂತಾಜನಕವಾಗಿದೆ — ಹತ್ಯೆಕಾರಿಯು ಬಂಧಿಸಲ್ಪಟ್ಟನು –ಡಾಕ್ಟರರ ತಂಡವು ತುಂಬಾ ಶ್ರಮಿಸುತ್ತಿದೆ — ಮೆದಳು ಮತ್ತು ಕತ್ತಿನ ಹಿಂಭಾಗದಲ್ಲಿ ಸೇರಿರುವ ಗುಂಡನ್ನು ತೆಗೆಯಲಾಗುತ್ತಿದೆ.

★

ಕನ್ನಡಕ್ಕೆ ಪ್ರಾಶಸ್ತ್ಯ

ಬೆಂಗಳೂರು— ತಮ್ಮ ಭೈಲುಗಳ ಮೇಲಿನ ತಮ್ಮ ಟಿಪ್ಪಣಿಗಳನ್ನು ಕನ್ನಡದಲ್ಲಿ ಹಾಕುತ್ತಿರುವದಾಗಿ ಮಂತ್ರಿ ಶ್ರೀ ದೊಡ್ಡ ಗೌಡರು ಹೇಳಿದರು.

★

ಎಸ್ಸೆಸ್ಸೆಲ್ಸಿ

ಬೆಂಗಳೂರು— ಮಾರ್ಚ್ – ಏಪ್ರಿಲ್ ತಿಂಗಳಲ್ಲಿ ನಡೆದ ಎಸ್ಸೆಸ್ಸೆಲ್ಸಿ ಪರೀಕ್ಷೆ ಫಲಿತಾಂಶವು ತಾ|| 8 ರಂದು ಪ್ರಕಟಿಸಲಾಗುವುದು.

★

ಸರಕಾರದ ನಿಲುವು

ಬೆಂಗಳೂರು— ರಾಜ್ಯ ಸರಕಾರಕ್ಕೆ ಸೇರಿದಂತೆ ವ್ಯವಸಾಯೋತ್ಪನ್ನ ಮಾರುಕಟ್ಟೆ ಶಾಸನದಲ್ಲಿನ ನಿಲುವಿನಲ್ಲಿ ಬದಲಾವಣೆಯಿಲ್ಲವೆಂದು ಮುಖ್ಯ ಮಂತ್ರಿಗಳೆಲ್ಲರು ಅಭಿಪ್ರಾಯಪಟ್ಟರುವರು.

ಶ್ರೀ ಜತ್ತಿಯವರ ಗುಂಪು

ಬೆಂಗಳೂರು— ಮಂತ್ರಿಮಂಡಲದಲ್ಲಿ ಶ್ರೀ ಜತ್ತಿಯವರ "ಗುಂಪಿನವರಿಗೆ ಸ್ಥಾನ ಕೊಡುವ ವಿಷಯದಲ್ಲಿ ಮತ್ತೆ ಜತ್ತಿಯವರೊಂದಿಗೆ ಮುಖ್ಯ ಮಂತ್ರಿಗಳು ಮಾತುಕತೆ ನಡೆಸಲಿರುವರು.

ಭಾಷಾ ನೀತಿ ವಿಷಯದಲ್ಲಿ

ನವದೆಹಲಿ— ಭಾಷಾ ನೀತಿ ಪರಾಮರ್ಶೆಯಲ್ಲಿ, ಕೇಂದ್ರ ಸರಕಾರವು ಹಿಂದಿಯೇತರ ರಾಜ್ಯಗಳೊಡನೆ ಪರ್ಯಾಲೋಚಿಸಿ, ಕೆವಶ್ಯವಾದ ತಿದ್ದುಪಡಿ ಮಾಡುವದಾಗಿ ಪ್ರಧಾನಿಯವರು ತಮಿಳುನಾಡು ವಿದ್ಯಾರ್ಥಿ ಸಂಘಟನೆಯ ವ್ಯವಸ್ಥಾಪಕರೂ, ಏ ಐ ಸಿ ಸಿ ಸದಸ್ಯರೂ ಆದ ಶ್ರೀ ರಾಮಮೂರ್ತಿಯವರಿಗೆ ತಿಳಿಸಿದರೆಂದೇ ವರದಿಯಾಗಿದೆ.

ಶಿವಸೇನೆ ದಾಂಧಲೆ

ಬೊಂಬಾಯಿ— "ಶಿವಸೇನಾ ಜೈದ ಬಾದ್" ಎಂದು ಕೂಗಿಕೊಳ್ಳುತ್ತಾ, ಗುಂಪೊಂದು ದಕ್ಷಿಣ ಬೊಂಬಾಯಿನಲ್ಲಿ ದಕ್ಷಿಣ ಭಾರತೀಯರ ಹೋಟಲುಗಳ ಮೇಜು ಕುರ್ಚಿಗಳನ್ನು ಒಡೆದು, ಪೀಠೋಪಕರಣಗಳನ್ನು ಹಾಳುಮಾಡಿ ಸಿಕ್ಕಿದ ಪದಾರ್ಥಗಳನ್ನು ಲೂಟಿ ಮಾಡಿದರು.

ಬದ್ರಿನಾಥ್‌ಗೆ ಎಲೆಕ್ಟ್ರಿಕ್ ದೀಪ

ಬದ್ರಿನಾಥ್ ಪಟ್ಟಣಕ್ಕೆ ಅಕ್ಟೋಬರಿನ ಹೊತ್ತಿಗೆ ಎಲೆಕ್ಟ್ರಿಕ್ ದೀಪ ಹಾಕಲಾಗುತ್ತೆ

★

ಪ್ರಧಾನಿಗಳ ಪ್ರವಾಸ

ಪ್ರಧಾನಿ ಇಂದಿರಾರವರು ಮೈಸೂರು ರಾಜ್ಯದಲ್ಲಿ ಜುಲೈನಲ್ಲಿ ಪ್ರವಾಸ ಮಾಡಲು ಅನುಮತಿಸಿರುವದಾಗಿ ಮುಖ್ಯಮಂತ್ರಿಗಳು ಹೇಳಿರುವರು.

★

ಮಿಲಿಟರಿ ನೆರವು ದುರುಪಯೋಗ

ಪಾಕಿಸ್ಥಾನಕ್ಕೆ ಇಟಲಿ ಮೂಲಕ ನೆರವು ನೀಡುವ ಅಮೇರಿಕಾ ಆಡಳಿತಗಾರರ ಯೋಜನೆಯನ್ನು ನ್ಯೂಯಾರ್ಕ್ ಟೈಮ್ಸ್, ಇದು ಮಿಲಿಟರಿ ನೆರವಿನ ದುರುಪಯೋಗ ಎಂದಿದೆ.

ರಾಬರ್ಟ್ ಕೆನೆಡಿ ಈ ಮಧ್ಯಾಹ್ನ ನಿಧನರಾದರು.

ತುಂಡು ಲಂಗ ಧರಿಸುವವರು ನರಕಕ್ಕೆ ಹೋಗುವರು

ಕಾರಕಾಸ್ (ವೆನಜೂಲಾ)– ಮಹಿಳೆಯರು ಸರಿಯಾದ ಉಡುಪಿನಿಂದ ಚರ್ಚುಗಳಿಗೆ ಬರಬೇಕು ; ತುಂಡು ಲಂಗದೊಡನೆ ಬಂದರೆ ಹೊರಕ್ಕೆ ಕಳುಹಿಸಲಾಗುವದು, ಎಂದು ಇಲ್ಲಿಯ ಎಲ್ಲಾ ಕ್ಯಾಥಲಿಕ್ ಚರ್ಚುಗಳ ಹೊರಗೂ ನೋಟೀಸು ಹಾಕಲಾಗಿದೆ. ಕಾರಕಾಸ್ ಚರ್ಚಿನ ಗುರು ಆಲ್ಫಡೋ ಲೋಬರ್ಡೆರ ಹೇಳಿಕೆಯಂತೆ– ತುಂಡು ಲಂಗಗಳನ್ನು ಕ್ಯಾಥಲಿಕ್ ಚರ್ಚುಗಳು ಖಂಡಿಸುವವು, ಮತ್ತು ಅಂತಹವನು ಧರಿಸುವನವರು ನರಕಕ್ಕೆ ಹೋಗುವರು, ಎಂದಾಗಿದೆ. ಇಲ್ಲಿಯ ಶೇಕಡ 70 ಯುವತಿಯರು ತುಂಡುಲಂಗ ಧರಿಸುತ್ತಾರೆ.

*

ಅವಳ ತ್ರಿವಳಿ ಮಕ್ಕಳ ಜನನ

ಜೆಕೊಸ್ಲೊವಾಕಿಯಾದಲ್ಲಿ ಪ್ರತಿ ವರ್ಷವೂ ಅವಳಿ ಮಕ್ಕಳು ಹೆಚ್ಚಾಗಿ ಹುಟ್ಟುತ್ತಿದ್ದಾರೆ. 1960 ರಲ್ಲಿ 2295 ಜತೆ ಮಕ್ಕಳು ಹುಟ್ಟಿದವು. 1965 ರಲ್ಲಿ 2330 ಜೊತೆ ಅವಳಿ ಮಕ್ಕಳು ಹುಟ್ಟಿದರು. 1960 ರಲ್ಲಿ ಹನ್ನೆರಡು ತ್ರಿವಳಿಗಳು ಹುಟ್ಟಿದ್ದವು. 1965 ರಲ್ಲಿ 17 ತ್ರಿವಳಿಗಳು ದಾಖಲೆಯಾದವು.

.....

ಕೋಕೋ ವ್ಯವಸಾಯ

ಕಲ್ಲೀಕೋಟೆ— 4 ನೇ ಯೋಜನೆಯಲ್ಲಿ, ಮೈಸೂರು, ಮದರಾಸು, ಮತ್ತು ಕೇರಳದಲ್ಲಿ ತಲಾ 5000 ಎಕ್ರೆಯಲ್ಲಿ ವ್ಯವಸಾಯ ಮಾಡಲಾಗುತ್ತದೆ.

ಅಶೋಕ ಮಿಷಿನ್‌ಸ್ಟೀಲ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಅಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ

ಗೋವಧೆ ಕೂಡಲೆನಿಷೇಧವಾಗಲಿ

Cow Slaughter should be banned Immediately

SHAKTI SUDHA

A Superb Tonic

Protect the Cow

ಗೋರಕ್ಷಣೆ ಮತ್ತು ಹಸುಗಳಿಂದಾಗುವ ಲಾಭಗಳು ಹೆಚ್ಚಿ ಚಿತ್ರಗಳಲ್ಲಿ ನಡೆಯಲಿ

ಶ್ರೀ ಶಂಕರಾಚಾರ್ಯ ಜಗದ್ಗುರು ಶೃಂಗೇರಿ ಶಾರದಾಪೀಠ. ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಆಜ್ಞಾನುಸಾರ ಈ ಗ್ರಂಥ ಕೃಪೆಯಾಗಿದೆ

ಕನ್ನಡನಾಡಿನಲ್ಲಿ ಗೋರಕ್ಷಣೆ ವಾತಾವರಣ ತರುವುದೇ ಈ ಚಿತ್ರದ ಉದ್ದೇಶ. ಪ್ರಮುಖ ಪಾತ್ರಗಳಲ್ಲಿ ವಿಷ್ಣುವರ್ಧನ್ ಮತ್ತು ಬಿ. ಸರೋಜಾದೇವಿ

ವಿಚಾರಣೆಗೆ ವಿತರಕ ಪ್ರಚಾರ ಮಾಡುವವರಿಗೆ . ವಾರ್ತಾರ್ಹ ಜಂಟಿ 50 ಪೈಸೆ

ವುಡ್‌ಲಾಂಡ್ಸ್ ಜನಪ್ರಿಯ 5 ನೇ ವಾರ

.... ಸುಬೋಧ್ ಮುಖರ್ಜಿಯವರ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಷಾಗಿರ್ದ್ Shagird

ತಾರಾಗಣ— ಜಾಯ್ ಮುಖರ್ಜಿ, ಸೈರಾಬಾನು, ನಾಜಿರ್ ಹುಸೇನ್
ಅಚ್ಛಲ ಸಹದೇವ್, ಐ. ಎಸ್. ಜೋಹರ್ [ದಿನ 3 ಪ್ರದರ್ಶನ]

ಅಮೋಘ 4ನೇ ವಾರ

ಆ ಪೆರ—

.... ಅಮೋಘ ಕನ್ನಡ ಚಿತ್ರ ....

ಬೆಂಗಳೂರು ಮೇಲ್

ಪಾತ್ರ : ರಾಜಕುಮಾರ್ ನರಸಿಂಹರಾಜು ಕೊಟ ರಕರ್
ಅಶ್ವಥ್ ಜಯಂತಿ ವಿಜಯಲಲಿತ

Help The Gorakshana

ಗೋರಕ್ಷಣೆಗೆ ಬೆಂಬಲ ನೀಡಿ

— ಗೋಕ್ಷೀರ ವ್ಯವಸಾಯಕ್ಕೆ ಉತ್ತೇಜನ ನೀಡಿ —

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಹಂದಾವಾಯಿದೆ ಕಳೆದುಹೋದವರು ಇಮೇಲ್ಲಿ ಹಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿಎಸ ವಿಶ್ವನಾಥ್ ಜಯನಗರ, ಬೆಂಗಳೂರು
ಶ್ರೀ ಬಿ ಜಿ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರಂ, ಮೈಸೂರು
ಶ್ರೀ ಅನಂತನಂಪಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರಸಭಾ.ಹೊಂಗನೂರ
ಗೋರಕ್ಷಣ ಆಫೀಸು ಸತ್ಯವಾದಿ ಪ್ರೆಸ್ ಚಾಮರಾಜಪುರಂ ಮೈಸೂರು ೪

ವಿಳಾಸ— ಗೋರಕ್ಷಣ ಆಫೀಸು 1067 ಚಾವರಾಜಪುರಂ, ಮೈಸೂರು

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Edited, Printed & Published by Dharmapracharn Nirata M S Krishna Rao (Proprietor) at the Satyavadi Press Chamarajapuram, Mysoe 4